ಸಿಸಿ ನಂ. 286/2019 ಪಿ.ಡಬ್ಲೂ-1

ಸಾಕ್ಷಿಯ ಹೆಸರುಃ ಎಸ್.ಸಿ.ಕೃಷ್ಣೇಗೌಡ

ದಿನಾಂಕಃ **18-01-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಟಿ. ವಕೀಲರಿಂದಃ**

ನಾನು ನಿವೃತ್ತ ಅಂಚೆ ನೌಕರ. ಈಗ ವ್ಯವಸಾಯ ಮಾಡುತ್ತಿದ್ದೇನೆ. ನನಗೂ ಮತ್ತು ಆರೋಪಿಗೂ ಯಾವುದೇ ಪರಿಚಯ ಇಲ್ಲ ಎಂದರೆ ಸಾಕ್ಷಿ ನನಗೆ ಪರಿಚಯ ಇದೆ ಎನ್ನುತ್ತಾರೆ. ಆರೋಪಿಯ ಕುಟುಂಬದಲ್ಲಿ ಎಷ್ಟು ಜನ ವಾಸವಾಗಿದ್ದಾರೆ ಎಂದು ನಿಮಗೆ

ಗೊತ್ತಿಲ್ಲ ಎಂದರೆ ಸಾಕ್ಷಿ ಅವರ ಹೆಂಡತಿ, ಮಕ್ಕಳು ಮತ್ತು ತಾಯಿ ಇದ್ದಾರೆ ಎನ್ನುತ್ತಾರೆ. ಅಂಚೆ ಇಲಾಖೆಯಲ್ಲಿ ಹಣವನ್ನು ಠೇವಣಿಯಾಗಿ ಇಟ್ಟರೆ ಅದಕ್ಕೆ ಬಡ್ಡಿ ಸೇರಿಸಿಕೊಡುತ್ತಾರೆ ಎಂದರೆ ಸರಿ. ಯಾವುದೇ ವ್ಯಕ್ತಿ ಬೇರೆ ಯಾವುದೇ ವ್ಯಕ್ತಿಗೆ ಹಣ ನೀಡಿದರೆ ಬಡ್ಡಿ ಪಡೆಯುತ್ತಾರೆ ಎಂದರೆ ಸರಿ.

2) ಆರೋಪಿ ನನಗೆ ಸಂಬಂಧಿಕರು ಅಲ್ಲ. ಆರೋಪಿ ನನ್ನ ಸ್ನೇಹಿತರು ಅಲ್ಲ ಎಂದರೆ ಸಾಕ್ಷಿ ಅವರು ನನ್ನ ಸ್ನೇಹಿತರು ಎನ್ನುತ್ತಾರೆ. ಆರೋಪಿಗೆ ಯಾವಾಗ ಕೆಲಸ ಸಿಕ್ಕಿತ್ತು ಮತ್ತು ಎಷ್ಟು ಸಂಬಳ ಪಡೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಆರೋಪಿ ನನಗೆ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕಳುಹಿಸಿದ ನೋಟೀಸು ಖುದ್ದು ಜಾರಿಯಾಗಿದೆ. ನೋಟೀಸಿನಲ್ಲಿ ಯಾವ ಕಾರಣಕ್ಕಾಗಿ ಚೆಕ್ಕು ವಾಪಸ್ಸು ಬಂದಿದೆ ಎಂದು ನಮೂದಿಸಿರುತ್ತೀರಿ ಎಂದರೆ ಸಾಕ್ಷಿ ಅವರ ಬ್ಯಾಂಕ್ ಖಾತೆಯಲ್ಲಿ ಹಣವಿಲ್ಲದ ಕಾರಣ ಚೆಕ್ಕು ವಾಪಸ್ಸು ಬಂದಿದೆ ಎಂದು ನಮೂದಿಸಿರುತ್ತೇನೆ ಎನ್ನುತ್ತಾರೆ. ನನಗೆ ಇಂಗ್ಲೀಷ್ ಭಾಷೆ ಓದಲು ಬರುವುದಿಲ್ಲ. ನಿಪಿ-02 ರಲ್ಲಿ 'Exceeds arrangements' ಎಂದು ನಮೂದಿಸಿದೆ ಎಂದರೆ ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ ಎನ್ನುತ್ತಾರೆ. ನಿಪಿ-03 ರಲ್ಲಿ ಸಾಕಷ್ಟು ಹಣವಿಲ್ಲ ಮತ್ತು 'Exceeds arrangements' ಎಂದು ನಮೂದಿಸಿದ್ದು ಇದರಲ್ಲಿ ಯಾವುದು ಸತ್ಯ ಎಂದರೆ ಸಾಕಷ್ಟು ಹಣವಿಲ್ಲ ಎಂಬುದು ಸತ್ಯ ಎನ್ನುತ್ತಾರೆ. ನಮ್ಮ ವಕೀಲರ ನೀಡಿದ ನೋಟೀಸಿನಲ್ಲಿ ಏನು ಬರವಣಿಗೆಯಾಗಿದೆ ಎಂದು ನೀವು ತಿಳಿದುಕೊಂಡಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

3) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುವ ಸಮಯದಲ್ಲಿ ಅದರಲ್ಲಿ ಏನು ಬರವಣಿಗೆಯಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಯ ಮೇಲೆ ಬೇರೆ ಯಾರಾದರೂ ಚೆಕ್ ಪ್ರಕರಣ ಸಲ್ಲಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಗ್ರಾಮದ ಮಂಜೇಗೌಡ ನನ್ನ ಸ್ನೇಹಿತರು ಮತ್ತು ಸಂಬಂಧಿ ಎಂದರೆ ಸಾಕ್ಷಿ ನನಗೆ ಆ ವ್ಯಕ್ತಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಲಿಗ್ರಾಮದ ಸುಭಾಷ್‌ಚಂದ್ರಜೈನ್ ನನಗೆ ಗೊತ್ತಿಲ್ಲ. ನನ್ನ ಮೊಬೈಲ್ ಸಂಖ್ಯೆ ಹೇಳಲು ಬರುತ್ತದೆ, ಅದು 9449405891. ನನ್ನ ಈ ಮೊಬೈಲ್ ಸಂಖ್ಯೆಯಿಂದ ಮಂಜೇಗೌಡ ಮತ್ತು ಸುಭಾಷ್‌ಚಂದ್ರಜೈನ್ ರವರಿಗೆ ಕಾಲ್ ಹೋಗಿರುವುದಿಲ್ಲ. ಸಾಕ್ಷಿ ಮುಂದುವರಿದು ಸುಭಾಷ್‌ಚಂದ್ರಜೈನ್ ರವರಿಗೆ ಒಂದು ಬಾರಿ ಕಾಲ್ ಮಾಡಿರುತ್ತೇನೆ ಎನ್ನುತ್ತಾರೆ. ನನ್ನ ಮೊಬೈಲ್ ಕಾಲ್ ಡೀಟೇಲ್ಸ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಾನು ತೆರಿಗೆ ಪಾವತಿ ಮಾಡುತ್ತೇನೆ. ಈಗ ತೆರಿಗೆ ಸಂದಾಯ ಮಾಡುತ್ತಿಲ್ಲ. ನಾನು ರೂ.15,00,000/- ಹಣವನ್ನು ಸಾಲಿಗ್ರಾಮದ ಎಸ್.ಬಿ.ಐ. ಬ್ಯಾಂಕಿನಲ್ಲಿ ಇಟ್ಟುಕೊಂಡಿರುತ್ತೇನೆ. ಈ ಕುರಿತು ಬ್ಯಾಂಕ್ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಈ ಖಾತೆಯನ್ನು ಹೊರತುಪಡಿಸಿ ನವನಗರ ಬ್ಯಾಂಕ್‌ನಲ್ಲಿ ಖಾತೆಯನ್ನು ಹೊಂದಿರುತ್ತೇನೆ.

4) ನನಗೆ ಮೂವರು ಮಕ್ಕಳಿದ್ದು, ಅವರುಗಳಲ್ಲಿ ಇಬ್ಬರು ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿರುತ್ತೇನೆ ಹಾಗೂ ಮಗ ತೀರಿಕೊಂಡಿರುತ್ತಾನೆ. ನಾನು ಸಾಲಿಗ್ರಾಮದಲ್ಲಿರುವ ನಮ್ಮ ಮನೆಯಲ್ಲಿಯೇ ಆರೋಪಿಗೆ ಹಣವನ್ನು ನೀಡಿರುತ್ತೇನೆ.

ನಾನು ಆರೋಪಿಗೆ ಹಣ ಕೊಟ್ಟ ವಿಚಾರ ನನ್ನ ಹೆಂಡತಿಗೆ ಗೊತ್ತು. ಆರೋಪಿಗೆ ಹಣ ಕೊಡುವಾಗ ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ಆರೋಪಿ ಇದ್ದೆವು. ಆರೋಪಿ ಹಣ ಕೇಳಿದ ದಿನವೇ ಹಣವನ್ನು ಕೊಟ್ಟಿರುತ್ತೇನೆ. ನಿಪಿ-01ರಲ್ಲಿರುವ ಬರವಣಿಗೆ ಮತ್ತು ಸಹಿಯಲ್ಲಿ ವ್ಯತ್ಯಾಸವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರೇ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಪಿ-01ರಲ್ಲಿರುವ ಎಲ್ಲ ಬರವಣಿಗೆಯನ್ನು ಆರೋಪಿಯೇ ಬರೆದಿರುತ್ತಾರೆ. ನಿಪಿ-01ರಲ್ಲಿರುವ ಬರವಣಿಗೆಯನ್ನು ಬರವಣಿಗೆ ತಜ್ಞರಿಗೆ ಪರಿಶೀಲನೆಗಾಗಿ ಕಳುಹಿಸಲು ನನಗೇನು ತೊಂದರೆ ಇಲ್ಲ. ಆ ದಿನ ನನ್ನ ಬಳಿ ರೂ.3,00,000/- ಇತ್ತು ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇರುವುದಿಲ್ಲ.

5) ಆರೋಪಿ ನನಗೆ ಪರಿಚಯವೇ ಇರಲಿಲ್ಲ ಹಾಗೂ ನಾನು ನನ್ನ ಸ್ನೇಹಿತರಿಂದ ಚೆಕ್ಕನ್ನು ಪಡೆದುಕೊಂಡು ಬಂದು ದುರ್ಲಾಭ ಪಡೆಯುವ ಉದ್ದೇಶದಿಂದ ಈ ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಭಾಷ್ ಚಂದ್ರ ಜೈನ್ ಮತ್ತು ಮಂಜೇಗೌಡರವರು ಎರಡು ಚೆಕ್ ಪ್ರಕರಣಗಳನ್ನು ಕೆ.ಆರ್.ನಗರದ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಆ ಎರಡು ಚೆಕ್ ಪ್ರಕರಣಗಳಲ್ಲಿ ಆರೋಪಿ ದೋಷ ಮುಕ್ತನಾದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.